GOVERNMENT OF KARNATAKA

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/ಎನ್‌ಬಿಎ/2014-15

**ನಿರ್ದೇಶಕರವರ ಕಛೇರಿ,**
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
**ದಿನಾಂಕ: 29.11.2016**

**ಇವರಿಗೆ**

**ಪ್ರಾಂಶುಪಾಲರುಗಳು,**

ಸರ್ಕಾರಿ ಪಾಲಿಟೆಕ್ನಿಕ್‌ಗಳು, ತುಮಕೂರು/ಚನ್ನಪಟ್ಟಣ/ಚಾಮರಾಜನಗರ/ಬೆಳಗಾವಿ/ವಿಜಯಪುರ/ಕಲಬುರಗಿ/ಕೆ.ಆರ್.ಪೇಟೆ/ಚಿಂತಾಮಣಿ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ, ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ, ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು, ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ, ವಿ.ಐ.ಎಸ್.ಎಸ್.ಜೆ, ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ, ಸಿ.ಪಿ.ಸಿ. ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು, ಡಿ.ಎ.ಸಿ.ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು, ಸರ್ಕಾರಿ ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು.

**ಮಾನ್ಯರೇ,**

ವಿಷಯ: ರಾಷ್ಟ್ರಿಯ ಮಾನ್ಯತಾ ಮಂಡಳಿಯಿಂದ ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡುವ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಹೆಚ್ಚಿನ ಅನುದಾನವನ್ನು ಮೊದಲ ಹಂತದಲ್ಲಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ನಿರ್ದೇಶನಾಲಯದ ಆದೇಶ ಸಂಖ್ಯೆ: ಡಿಟಿಇ/01/ಬಿಯುಡಿ/2016 ದಿನಾಂಕ: 7.11.2016

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಮೇಲಿನ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಎನ್.ಬಿ.ಎ ವತಿಯಿಂದ ಮಾನ್ಯತೆಯನ್ನು ಪಡೆಯಲು ಮೊದಲ ಹಂತವಾಗಿ ಯೋಜನೇತರ ಲೆಕ್ಕ ಶೀರ್ಷಿಕೆ 2203-00-105-0-01-051 ಅಡಿ ಅನುಬಂಧದನ್ವಯ ಪ್ರತಿ ಪ್ರೊಗ್ರಾಂಗೆ ತಲಾ ರೂ. ಐವತ್ತು ಸಾವಿರಗಳಂತೆ ಒಟ್ಟು ಹದಿನಾರು ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರು ಈ ಅನುದಾನವನ್ನು ಕೆಳಗೆ ನಿಗದಿಪಡಿಸಿರುವ ಉದ್ದೇಶಕ್ಕೆ ಮಾತ್ರ ಸದ್ಬಳಕೆ ಮಾಡಬೇಕಾಗಿರುತ್ತದೆ. ಒಂದು ವೇಳೆ ಇದನ್ನು ಬೇರೆ ಉದ್ದೇಶಕ್ಕೆ ಬಳಸಿದ್ದಾದಲ್ಲಿ ಮುಂದಿನ ಆಗುಹೋಗುಗಳಿಗೆ ಪ್ರಾಚಾರ್ಯರು ನೇರ ಹೊಣೆಗಾರರಾಗಿರುತ್ತಾರೆ.

..2

ಮಾನ್ಯತಾ ಪ್ರಕ್ರಿಯೆಗಾಗಿ ನೀಡಿರುವ ಅನುದಾನವನ್ನು, ಈ ಕೆಳಗಿನ ಉದ್ದೇಶಗಳಿಗೆ ಮಾತ್ರ ವಿನಿಯೋಗಿಸಬಹುದಾಗಿದೆ.

1. ಪ್ರಾಂಶುಪಾಲರ ಕೊಠಡಿಯಲ್ಲಿ ಈ ಕೆಳಕಂಡ ನಾಮಫಲಕಗಳನ್ನು ಅಳವಡಿಸಲು:
   Institute: Vision, Mission, POs, 3-Yrs Admission Statistics, 3-Yrs Result Statistics and Placement Details
2. ವಿಭಾಗಾಧಿಕಾರಿಗಳ ಕೊಠಡಿಯಲ್ಲಿ ಈ ಕೆಳಕಂಡ ನಾಮಫಲಕಗಳನ್ನು ಅಳವಡಿಸಲು:
   Dept.: Vision, Mission, PEOs, POs, 3-Yrs Admission Statistics, 3-Yrs Result Statistics and Placement Details
3. ಸಂಸ್ಥೆಯ ಆವರಣದಲ್ಲಿ ಪ್ರಯೋಗಾಲಯಗಳಲ್ಲಿ ಈ ಕೆಳಕಂಡ ನಾಮಫಲಕಗಳನ್ನು ಅಳವಡಿಸಲು:
   Institue: Vision, Mission and PEOs/ Dept.: Vision, Mission and PEOs
4. ಆಡಳಿತ ಶಾಖಾ ಕೊಠಡಿಗಳು, ತರಗತಿಗಳು, ಪ್ರಯೋಗಾಲಯಗಳು, ಗ್ರಂಥಾಲಯ, ಶೌಚಾಲಯಗಳು, ಕೇಂದ್ರಿಕೃತ ಸೌಲಭ್ಯಗಳಿಗೆ ಮತ್ತು ಇತ್ಯಾದಿಗಳಿಗೆ ನಾಮಫಲಕಗಳನ್ನು ಅಳವಡಿಸುವುದು.
5. ಲೇಖನ ಸಾಮಗ್ರಿ :
   ಮಾಹಿತಿಗಳನ್ನು ಕಲೆಹಾಕಲು ಹಾಗೂ ದಾಖಲಾತಿಗಳಿಗಾಗಿ 4" ಇಂಚಿನ ಬಾಕ್ಸ್ ಮತ್ತು 2" ಇಂಚಿನ ಬಾಕ್ಸ್ folders ಫೈಲ್‌ಗಳನ್ನು ಖರೀದಿಸಲು, ಸಂಸ್ಥೆಯ ಕಡತಗಳಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸಲು ಬೇಕಾದ ಪೇಪರ ಖರೀದಿಸಲು, ಪ್ರಿಂಟರಗಳ ಟೋನರ್‌ಗಳನ್ನು ಖರೀದಿಸಲು,
6. ವಿಭಾಗಗಳಲ್ಲಿ network ವ್ಯವಸ್ಥೆ ಸಜ್ಜುಗೊಳಿಸಲು
7. ವಿಭಾಗಗಳ ಸಾಧನೆಗಳನ್ನು ಬಿಂಬಿಸಲು Display Unit ಖರೀದಿಸಲು
8. ಇತರೇ ಸಂಬಂಧಿತ ಮಾನ್ಯತಾ ಪ್ರಕ್ರಿಯೆಗಳು ಕೈಗೊಳ್ಳಲು.

ಜಂಟಿ ನಿರ್ದೇಶಕರು (ಸಿಡಿಸಿ) 29/11/14

# ಅನುಬಂಧ

**ಮೊದಲ ಹಂತದ ಮಾನ್ಯತಾ-ಮೌಲ್ಯಮಾಪನಕ್ಕೆ ಒಳಪಡುವ ಸರ್ಕಾರಿ ಪಾಲಿಟೆಕ್ನಿಕ್‌ಗಳ ವಿವಿಧ ಪ್ರೊಗ್ರಾಂಗಳು**

| ಕ್ರ ಸಂ. | ಸಂಸ್ಥೆಗಳು | ಎನ್‌ಬಿಎ ಮಾನ್ಯತೆ ಪಡೆಯಲು ಅರ್ಹ ಪ್ರೊಗ್ರಾಂಗಳು |
|---|---|---|
| 1 | ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | 4 (ಸಿಇ, ಸಿಎಸ್, ಇಸಿ, ಎಂಇ) |
| 2 | ಕರ್ನಾಟಕ ಪಾಲಿಟೆಕ್ನಿಕ್, ಮಂಗಳೂರು | 2 (ಸಿಇ, ಎಂಇ) |
| 3 | ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ | 2 (ಸಿಇ, ಇಸಿ) |
| 4 | ಡಿ.ಎ.ಸಿ.ಜಿ ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು | 2 (ಇಇ, ಎಂಇ) |
| 5 | ಶ್ರೀಮತಿ ಎಲ್.ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ | 2 (ಇಇ, ಎಂಇ) |
| 6 | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | 2 (ಎಟಿ, ಇಇ) |
| 7 | ಸರ್ಕಾರಿ ಪಾಲಿಟೆಕ್ನಿಕ್, ಕಲಬುರಗಿ | 1 (ಎಂಇ) |
| 8 | ಸರ್ಕಾರಿ ಪಾಲಿಟೆಕ್ನಿಕ್, ವಿಜಯಾಪುರ | 1 (ಎಂಇ) |
| 9 | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ | 2 (ಸಿಇ, ಎಂಇ) |
| 10 | ಸರ್ಕಾರಿ (ಸಿ.ಪಿ.ಸಿ) ಪಾಲಿಟೆಕ್ನಿಕ್, ಮೈಸೂರು | 3 (ಸಿಇ, ಇಇ, ಎಂಇ) |
| 11 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ | 2 (ಇಇ, ಎಂಇ) |
| 12 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | 2 (ಸಿಡಿಶಿಪ್, ಇಸಿ) |
| 13 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ | 2 (ಸಿಇ, ಎಂಇ) |
| 14 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | 2 (ಇಇ, ಎಂಇ) |
| 15 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ | 2 (ಇಇ, ಎಂಇ) |
| 16 | ವಿ.ಐ.ಎಸ್.ಎಸ್.ಜೆ ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ | 1 (ಇಇ) |
| | **ಒಟ್ಟು** | **32 ಪ್ರೊಗ್ರಾಂಗಳು** |

29/11/16

ಜಂಟಿ ನಿರ್ದೇಶಕರು (ಸಿಡಿಸಿ)

**ಇವರಿಗೆ,**

1. ಜಂಟಿ ನಿರ್ದೇಶಕರು (ಯೋಜನೆ), ತಾಶಿನಿ, ಬೆಂಗಳೂರು ಇವರ ಮಾಹಿತಿಗಾಗಿ.
2. ಆಯವ್ಯಯ ಶಾಖೆಯ ಮಾಹಿತಿಗಾಗಿ.
3. ಇ-ಆಡಳಿತ ವಿಭಾಗ, ತಾಶಿನಿ, ಬೆಂಗಳೂರು ಇವರ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರ ಆಪ್ತ ಶಾಖೆಯ ಮಾಹಿತಿಗಾಗಿ